<u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾಯದಂಡಾಧಿಕಾರಿಯವರ ನ್ಯಾಯಾಲಯ, ಪೊನ್ನಂಪೇಟೆ.</u>

<u>ಕ್ರಿಮಿನಲ್ ಮೊಕದ್ದಮೆ ಸಂಖ್ಯೆ 907/2019</u> .

ಫ್ರಾ.ಸಾ.: 2
ಚಾ.ಸಾ.: 3

ಹೆಸರು : ಕೆಂಚ
ತಂದೆಯ ಹೆಸರು : ಅಯ್ಯಣ್ಣ
ವಯಸ್ಸು : 57 ವರ್ಷ
ಉದ್ಯೋಗ : ಕೂಲಿ
ವಿಳಾಸ : ಕುಟ್ಟ .

... ....................................................................................................... ...

ದಿನಾಂಕ 18 ನೇ ಏಪ್ರಿಲ್ 2023 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ</u>- <u>ಮಾನ್ಯ ಸ ಸ ಅ ರವರಿಂದ</u> : -

ಚಾಸಾ 1 ಮತ್ತು 2 ರವರ ಪರಿಚಯವಿದೆ. ನಮ್ಮ ಚಾಸಾ 1 ರವರು ಊರಿಗೆ ಹೋಗುವಾಗ ಮನೆ ಕಡೆ ನೋಡಿಕೊಳ್ಳುವಂತೆ ಹೇಳಿ ಹೋಗಿದ್ದರು. ನಾನು ಹೋದಾಗ ಮನೆಯ ಹಿಂದಿನ ಬಾಗಿಲು ತೆರೆದಿತ್ತು. ಸದರಿ ವಿಚಾರವನ್ನು ನಾನು ದೂರವಾಣಿ ಕರೆ ಮಾಡಿ ನಮ್ಮ ಸಾಹುಕಾರರಿಗೆ ತಿಳಿಸಿದೆನು ರಾತ್ರಿ ವೇಳೆಗೆ ನಮ್ಮ ಸಾಹುಕಾರರು ಬಂದರು ಆ ನಂತರ ಮನೆಯ ಒಳಗಡೆ ಹೋಗಿ ನೋಡಿದೆವು. ನಮ್ಮ ಸಾಹುಕಾರರು ಮನೆಯಲ್ಲಿ ವಸ್ತುಗಳು ಕಾಣುತ್ತಿಲ್ಲ ಎಂದು ತಿಳಿಸಿದರು. ಈ ಬಗ್ಗೆ ಚಾಸಾ 1 ರವರು ದೂರು ನೀಡಿದರು. ಆ ನಂತರ ಕಳ್ಳತನ ಮಾಡಿದ್ದು ಎಂದು ಯಾರು ಎಂದು ತಿಳಿಯಿತು. ಅವರನ್ನು ನಾನು ನೋಡಿದ್ದೆ ಅವರ ಹೆಸರು ಗೊತ್ತಿಲ್ಲ. ಈ ಬಗ್ಗೆ ಪೊಲೀಸರು ವಿಚಾರಣೆ ಮಾಡಿಲ್ಲ.

ಪಾಟೀ ಸವಾಲುಃ ಆರೋಪಿ 1 ಪರ ವಕೀಲರಿಂದ

ನಾನು ಚಾಸಾ 1 ರವರ ಮನೆಯಲ್ಲಿ ಹುಟ್ಟಿನಿಂದ ಇದ್ದೇನೆ ಹಾಗೂ ಅವರು ಹೇಳಿದ ಕೆಲಸಗಳನ್ನು ಮಾಡುತ್ತೇನೆ. ಆ ದಿನ ಮನೆ ಬಾಗಿಲು ಹೇಗೆ ತೆಗೆದುಕೊಂಡು ಯಾರು ತೆಗೆದರು ನನಗೆ ಗೊತ್ತಿಲ್ಲ. ವಸ್ತುಗಳು ಕಾಣುತ್ತಿಲ್ಲ ಎಂಬ ವಿಚಾರ ನಮ್ಮ ಸಾಹುಕಾರರು ಹೇಳಿದ ಮೇಲೆ ನನಗೆ ತಿಳಿಯಿತ್ತು ಆ ಬಗ್ಗೆ ನನಗೆ ಖುದ್ದು ಮಾಹಿತಿ

ಇಲ್ಲ ಎಂದರೆ ಸರಿ.

ಮರು ವಿಚಾರಣೆ : - ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಖ್ತಲೇಖನದಂತೆ ಗಣಕಯಂತ್ರದಲ್ಲಿಬೆರಳಚ್ಚು ಮಾಡಲಾಗಿರುತ್ತದೆ)

**ಓದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.**

(ಸಾಕ್ಷಿಯವರ ಸಹಿ)

ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ.,ಪೊನ್ನಂಪೇಟೆ.